RNU AIR DHARWAD

# MAY 06, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಚುನಾವಣಾ ಆಯೋಗದ ನಿರ್ದೇಶನ; ಇಂದು ಮನೆ ಮನೆ ಪ್ರಚಾರಕ್ಕಷ್ಟೇ ಅವಕಾಶ.**
- **ಲೋಕಸಭೆ ಚುನಾವಣೆ ಪ್ರಕ್ರಿಯೆ ವೀಕ್ಷಣೆಗೆ, 23 ದೇಶಗಳ ಪ್ರತಿನಿಧಿಗಳು, ದಿಲ್ಲಿಗೆ ಆಗಮನ.**
- **14 ಲೋಕಸಭಾ ಕ್ಷೇತ್ರಗಳಲ್ಲಿ, ಸಾಂಪ್ರದಾಯಿಕ ಮತ್ತು ಧ್ಯೇಯಾಧಾರಿತ ಮತಗಟ್ಟೆಗಳ ಸ್ಥಾಪನೆ.**
- **ನುಡಿದಂತೆ ನಡೆದ ಕಾರಣ; ಜನತೆಯಲ್ಲಿ ತಮ್ಮ ಸರ್ಕಾರದ ಬಗ್ಗೆ ವಿಶ್ವಾಸ ಮೂಡಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**

<><><>

**ಈಗ ವಾರ್ತೆಗಳ ವಿವರ**

<><><>

**ಚುನಾವಣಾ ಆಯೋಗದ ನಿರ್ದೇಶನದಂತೆ, ಮತದಾನದ 48 ಗಂಟೆಗಳಿಗಿಂತ ಮುಂಚೆ, ಭಾನುವಾರ ಸಂಜೆ 5 ಗಂಟೆಗೆ, ಬಹಿರಂಗ ಪ್ರಚಾರ ಅಂತ್ಯಗೊಂಡಿದೆ. ಇಂದು ಮನೆ ಮನೆ ಪ್ರಚಾರಕ್ಕಷ್ಟೇ ಅವಕಾಶವಿದ್ದು, ಚುನಾವಣಾ ಆಯೋಗದ ನಿಯಮಾವಳಿ ಅನ್ವಯ, ಕ್ಷೇತ್ರಕ್ಕೆ ಸಂಬಂಧಿಸದ ಮತದಾರರು, ಆಯಾ ಕ್ಷೇತ್ರಗಳಿಂದ ಹೊರ ಹೋಗುವುದು ಕಡ್ಡಾಯ.**

<><><>

**ದಾವಣಗೆರೆ ಜಿಲ್ಲೆ ಚುನಾವಣಾಧಿಕಾರಿ, ಡಾಕ್ಟರ್ ಎಂ.ವಿ.ವೆಂಕಟೇಶ್ ಆಕಾಶವಾಣಿಗೆ ಈ ಬಗ್ಗೆ ಮಾಹಿತಿ ನೀಡಿ, ಚುನಾವಣಾ ಕಾರ್ಯಕ್ಕೆ 9 ಸಾವಿರಕ್ಕೂ ಅಧಿಕ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.**

<><><>

**ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ ಧ್ವನಿ 48 ಸೆಕೆಂದುಗಳು**

<><><>

ಲೋಕಸಭಾ ಚುನಾವಣೆಯನ್ನು ವೀಕ್ಷಿಸಲು, 23 ದೇಶಗಳ ಚುನಾವಣಾ ನಿರ್ವಹಣಾ ಸಂಸ್ಥೆಗಳಿಂದ, 75 ಅಂತಾರಾಷ್ಟ್ರೀಯ ಪ್ರತಿನಿಧಿಗಳು, ರಾಷ್ಟ್ರ ರಾಜಧಾನಿ ದಿಲ್ಲಿಗೆ ಆಗಮಿಸಿದ್ದಾರೆ. ಅತ್ಯುನ್ನತ ಗುಣಮಟ್ಟದ, ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವ, ತನ್ನ ಬದ್ಧತೆಗೆ ನೇರವಾಗಿ ಸಾಕ್ಷಿಯಾಗಲು, ಚುನಾವಣಾ ಆಯೋಗ ನೀಡಿದ ಆಹ್ವಾನದ ಮೇರೆಗೆ, ಈ ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿದ್ದಾರೆ. ಅಂತಾರಾಷ್ಟ್ರೀಯ ಪ್ರತಿನಿಧಿಗಳು ಒಟ್ಟು 6 ದಿನಗಳ ಕಾಲ, ದೇಶದ ವಿವಿಧ ಭಾಗಗಳಿಗೆ ಭೇಟಿ ನೀಡಿ ಚುನಾವಣಾ ಪ್ರಕ್ರಿಯೆಗಳನ್ನು ವೀಕ್ಷಿಸಲಿದ್ದಾರೆ.

ಈ ಕಾರ್ಯಕ್ರಮ ವಿದೇಶಿ ಚುನಾವಣಾ ನಿರ್ವಹಣಾ ಸಂಸ್ಥೆಗಳಿಗೆ, ಭಾರತದ ಚುನಾವಣಾ ವ್ಯವಸ್ಥೆಯ ಸೂಕ್ಷ್ಮತೆಗಳು ಮತ್ತು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಬಳಸುವ, ಉತ್ತಮ ಅಭ್ಯಾಸಗಳನ್ನು ಪರಿಚಯಿಸಲು ಪ್ರಯತ್ನಿಸುತ್ತದೆ ಎಂದು, ಚುನಾವಣಾ ಆಯೋಗ ತಿಳಿಸಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಜ್ಞಾನೇಶ್‌ಕುಮಾರ್ ಮತ್ತು ಡಾಕ್ಟರ್ ಸುಖ್ಬೀರ್ ಸಿಂಗ್ ಸಂಧು ಅವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಪ್ರತಿನಿಧಿಗಳು ಕರ್ನಾಟಕಕ್ಕೆ ಭೇಟಿ ನೀಡಿ, ವಿವಿಧ ಕ್ಷೇತ್ರಗಳಲ್ಲಿ ಮತದಾನ ವೀಕ್ಷಿಸಲಿದ್ದಾರೆ.

<><><>

ಕಲಬುರಗಿ ಲೋಕಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು ಮತದಾರರಿದ್ದಾರೆ. 20 ಲಕ್ಷ 98 ಸಾವಿರದ 202 ಮತದಾರರು ತಮ್ಮ ಹೆಸರು ನೋಂದಾಯಿಸಿದ್ದಾರೆ.

ಅತೀ ಕಡಿಮೆ ಮತದಾರರು ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿದ್ದಾರೆ. 16 ಲಕ್ಷ 41 ಸಾವಿರದ 156 ಜನ, ಈ ಕ್ಷೇತ್ರದಿಂದ ಮತ ಚಲಾಯಿಸಲಿದ್ದಾರೆ.

18 ರಿಂದ 19 ವರ್ಷ ವಯೋಮಾನದ, 6 ಲಕ್ಷ 90 ಸಾವಿರದ 929, ಯುವ ಮತದಾರರು, ಈ ಚುನಾವಣೆಯಲ್ಲಿ ಪ್ರಥಮ ಬಾರಿಗೆ ತಮ್ಮ ಮತ ಚಲಾಯಿಸಲಿದ್ದಾರೆ.

85 ವರ್ಷ ಮೇಲ್ಪಟ್ಟ, 2 ಲಕ್ಷ 29 ಸಾವಿರದ 263 ಜನ ಹಿರಿಯ ಮತದಾರರಿದ್ದಾರೆ.

ವಿಶೇಷಚೇತನ ವರ್ಗದ, 3 ಲಕ್ಷ 43 ಸಾವಿರದ 966 ಜನ ಮತದಾರರು ತಮ್ಮ ಮತ ಚಲಾಯಿಸಲಿದ್ದಾರೆ.

5 ಸಾವಿರದ 12 ಜನ, ಲಿಂಗತ್ವ ಅಲ್ಪಸಂಖ್ಯಾತ ಮತದಾರರಿದ್ದಾರೆ.

<><><>

ಸುರಪುರ ಉಪ ಚುನಾವಣೆ, ಮೀಸಲು ಅಭ್ಯರ್ಥಿ ವಿಧಾನಸಭಾ ಕ್ಷೇತ್ರದಲ್ಲಿ, ಒಟ್ಟು 2 ಲಕ್ಷ 83 ಸಾವಿರದ 83 ಮತದಾರರಿದ್ದಾರೆ. 65 ಜನ ಸೇವಾ ಮತದಾರರು, 6 ಸಾವಿರದ 714 ಯುವ ಮತದಾರರು, 2 ಸಾವಿರದ 383 ಹಿರಿಯ ಮತದಾರರು ಹಾಗೂ 3 ಸಾವಿರದ 819 ವಿಶೇಷಚೇತನ ಮತದಾರರು, ನಾಳೆ ತಮ್ಮ ಮತ ಚಲಾಯಿಸಲಿದ್ದಾರೆ.

ಇದು ವರೆಗೆ, ವಿಧಾನಸಭಾ ಕ್ಷೇತ್ರದಲ್ಲಿ, ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ, 8 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು, ಚುನಾವಣಾಧಿಕಾರಿ ಕಾವ್ಯಾರಾಣಿ ತಿಳಿಸಿದ್ದಾರೆ.

ಜೂನ್ 4 ರಂದು, ಯಾದಗಿರಿಯ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ, ಬೆಳಿಗ್ಗೆ 8 ಗಂಟೆಯಿಂದ, ಮತ ಎಣಿಕೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಯಾದಗಿರಿ ಲೋಕಸಭಾ ಕ್ಷೇತ್ರ ಹಾಗೂ ಸುರಪುರ ವಿಧಾನಸಭಾ ಮೀಸಲು ಅಭ್ಯರ್ಥಿ ಉಪ ಚುನಾವಣಾ ಕ್ಷೇತ್ರದಲ್ಲಿ, ನಾಳೆ ನಡೆಯಲಿರುವ ಮತದಾನಕ್ಕಾಗಿ, ಕೈಗೊಂಡ ಸಿದ್ಧತೆಗಳ ಕುರಿತು, ಜಿಲ್ಲಾ ಚುನಾವಣಾಧಿಕಾರಿ ಡಾಕ್ಟರ್ ಸುಶೀಲಾ ಬಿ., ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾ ಚುನಾವಣಾಧಿಕಾರಿ ಡಾಕ್ಟರ್ ಸುಶೀಲಾ ಬಿ., ಧ್ವನಿ 45 ಸೆಕೆಂದುಗಳು

<><><>

ನೈಋತ್ಯ ರೇಲ್ವೆಯ ಬೆಂಗಳೂರು ವಿಭಾಗದಿಂದ, ರಾಜ್ಯದ 2ನೇ ಹಂತದ ಲೋಕಸಭೆ ಚುನಾವಣೆ ವ್ಯಾಪ್ತಿಗೆ ಒಳಪಡುವ, 14 ಜಿಲ್ಲೆಗಳನ್ನು ತಲುಪಲು ಮತ್ತು ಮತದಾನ ಮಾಡಲು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು 5 ವಿಶೇ ’ ರೈಲುಗಳನ್ನು ಓಡಿಸಲಾಗುತ್ತಿದೆ.

<><><>

14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ, ಸಾಂಪ್ರದಾಯಿಕ ಮತ್ತು ಧ್ಯೇಯಾಧಾರಿತ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 'ನಾ ಭಾರತ; ಭಾರತ ನನ್ನಲ್ಲಿ' ಮತದಾರ ಜಾಗ್ರತಿ ಗೀತೆ, ಮೊಳಗಲಿದೆ.

<><><>

ಮಳೆ ನೀರು ಕೊಯ್ಲು, ಸಂಚಾರ ನಿಯಮಗಳ ಪಾಲನೆ, ಸ್ಕೌಟ್ಸ್ ಆಂಡ್ ಗೈಡ್ಸ್ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಿ, ಮತದಾನ ಹೆಚ್ಚಿಸಲು, 14 ಜಿಲ್ಲಾಡಳಿತಗಳು ಕ್ರಮ ಕೈಗೊಂಡಿವೆ.

<><><>

ಉತ್ತರಕನ್ನಡ ಜಿಲ್ಲೆ ಕಾರವಾರದ ಜಿಲ್ಲಾ ರಂಗಮಂದಿರದಲ್ಲಿ, 'ಪ್ರಜಾ ವತ್ಸಲೇ ಭಾರತಿ', ಮತದಾರ ಜಾಗ್ರತಿ ಯಕ್ಷಗಾನ ಪ್ರಸಂಗವನ್ನು ಆಯೋಜಿಸಲಾಗಿತ್ತು.

<><><>

ಗದಗ ಜಿಲ್ಲೆ, ಮುಂಡರಗಿ ತಾಲೂಕಿನ ಡಂಬಳ ಗ್ರಾಮದ, ಬಾಲಕಿಯರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ, ಮತದಾರರ ಗಮನ ಸೆಳೆಯಲು, ವಿಭಿನ್ನ ಕಲಾಕೃತಿಗಳನ್ನು ಚಿತ್ರಿಸಿ, ಅಲಂಕರಿಸಲಾಗಿದೆ.

<><><>

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, ಬಂಜಾರ ಮತ್ತು ಗೊಲ್ಲರ ಸಂಸ್ಕೃತಿ ಬಿಂಬಿಸುವ ಮತಗಟ್ಟೆಗಳು, ಆಕ ರ್ಕವಾಗಿವೆ ಎಂದು, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಇಟ್ನಾಳ್ ತಿಳಿಸಿದ್ದಾರೆ.

<><><>

ಶಿವಮೊಗ್ಗ ಜಿಲ್ಲಾಡಳಿತ, ಮತದಾರ ಜಾಗ್ರತಿ ಅಂಗವಾಗಿ, ನೆಹರೂ ಮೈದಾನದಲ್ಲಿ ಏರ್ಪಡಿಸಿದ್ದ ಮ್ಯಾರಾಥಾನ್‌ಗೆ, ಪ್ರಧಾನ ಜಿಲ್ಲಾ ನ್ಯಾಯಾಧೀಶ ಮಂಜುನಾಥ ನಾಯಕ್ ಚಾಲನೆ ನೀಡಿದರು.

<><><>

ಬಾಗಲಕೋಟೆ ಜಿಲ್ಲೆ ಲೋಕಸಭಾ ಕ್ಷೇತ್ರದಲ್ಲಿ, ಮತದಾರರಿಗೆ ಮಾಹಿತಿ ನೀಡಲು, ಸಾವಿರದ 726 ಎನ್.ಎಸ್.ಎಸ್ ಸ್ವಯಂಸೇವಕರು ಮತದಾನ ದಿನ ಕಾರ್ಯನಿರ್ವಹಿಸಲಿದ್ದಾರೆ.

<><><>

ಕಲಬುರಗಿ ನಗರದ ಪೊಲೀಸ್ ಕವಾಯತು ಮೈದಾನ ಹಾಗೂ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಸ್ವೀಪ್ ಕ್ರಿಕೆಟ್ ಪಂದ್ಯಾವಳಿ ಜರುಗಿತು.

<><><>

ಕೊಪ್ಪಳ ತಾಲೂಕು ಪಂಚಾಯ್ತಿ ಆವರಣದಲ್ಲಿ, ಗಾಳಿಪಟ ಉತ್ಸವದ ಮೂಲಕ, ಕಡ್ಡಾಯ ಮತದಾನದ ಕುರಿತು, ಜನರಲ್ಲಿ ಜಾಗೃತಿ ಸಂದೇಶ ನೀಡಲಾಗಿದೆ.

<><><>

ಕೊಪ್ಪಳ ತಾಲೂಕಿನ ಹಿರೇಮ್ಯಾಗೇರಿ ಗ್ರಾಮದ, ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ, ಮತದಾರ ಜಾಗೃತಿ ಸ್ವೀಪ್ ಕಾರ್ಯಕ್ರಮ ಹಾಗೂ ಕಾರ್ಮಿಕ ದಿನಾಚರಣೆ ಜರುಗಿತು.

<><><>

ರಾಜ್ಯದ ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ, ಕನಿ ಷ್ಟ 20 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ ಎಂದು, ಕಾಂಗ್ರೆಸ್ ಹಿರಿಯ ಮುಖಂಡ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ. ಎ.ಐ.ಸಿ.ಸಿ. ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೇವಾಲಾ ಅವರೊಂದಿಗೆ, ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು. ಜನಪರ ಯೋಜನೆ, ಜನಹಿತ ಸಾಧನೆ ತಮ್ಮ ಸರ್ಕಾರದ ಆದ್ಯತೆ ಎಂದ, ಮುಖ್ಯಮಂತ್ರಿಯವರು, ತಾವು ಇತ್ತೀಚೆಗೆ ಜಾರಿಗೊಳಿಸಿದ ಖಾತ್ರಿ ಯೋಜನೆಗಳ ಬಗ್ಗೆ ವಿಶೇಷವಾಗಿ ಉಲ್ಲೇಖಿಸಿದರು. ವಿಪಕ್ಷಗಳ ನಡೆಯನ್ನು ಟೀಕಿಸಿದ ಉಭಯ ಮುಖಂಡರು, ನುಡಿದಂತೆ ನಡೆದ ಕಾರಣ ಜನತೆಯಲ್ಲಿ ತಮ್ಮ ಸರ್ಕಾರದ ಬಗ್ಗೆ ವಿಶ್ವಾಸ ಮೂಡಿದೆ ಎಂದರು.

<><><>

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತನಾಡಿ, ಉದ್ಯೋಗಾಕಾಂಕ್ಷಿ ಯುವಜನರಿಗೆ ತಮ್ಮ ಸರ್ಕಾರ ಆಸರೆಯಾಗಿದೆ ಎಂದರು.

<><><>

ಈ ಮಧ್ಯೆ, ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ, ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ, ಮೈಸೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ ಒಡೆಯರ ಅವರು, ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿದರು.

<><><>

ನವ ಮಂಗಳೂರು ಬಂದರಿಗೆ, 'ಎಂ.ಎಸ್. ಇನ್ಸಿಗ್ನಿಯಾ' ಹೆಸರಿನ, ವಿದೇಶಿ ಪ್ರವಾಸಿ ನೌಕೆ ಆಗಮಿಸಿದೆ. 509 ಪ್ರವಾಸಿಗರು ಮತ್ತು 407 ಮಂದಿ ಸಿಬ್ಬಂದಿ ಸೇರಿ, ಒಟ್ಟು 916 ಜನರನ್ನು ಹೊತ್ತು ಬಂದ ಈ ನೌಕೆಗೆ, ಬಂದರು ಮಂಡಳಿ ಅಧಿಕಾರಿಗಳು, ಕರಾವಳಿಯ ಸಾಂಪ್ರದಾಯಿಕ ಶೈಲಿಯ ಸ್ವಾಗತ ಕೋರಿದರು. ಬಳಿಕ ಪ್ರವಾಸಿಗರು, ಮಂಗಳೂರಿನ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದರು. ಮಂಗಳೂರು ಬಂದರಿಗೆ ಆಗಮಿಸುತ್ತಿರುವ, ಈ ಋತುವಿನ, ಏಳನೆಯ ವಿದೇಶಿ ಪ್ರವಾಸಿ ನೌಕೆ, ಇದಾಗಿದೆ.

<><><>

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಸಮೀಪ, ಕಂಚಿನಕಲ್ ದುರ್ಗ ಬಳಿ, ಕಾಡಾನೆ ದಾಳಿಯಿಂದ, ಕೂಲಿ ಕಾರ್ಮಿಕ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ವರದಿಯಾಗಿದೆ. ಕಂಚಿನಕಲ್ ದುರ್ಗ ಅರಣ್ಯ ವ್ಯಾಪ್ತಿಯಲ್ಲಿ, ಕಳೆದ ಒಂದು ವರ್ಷದ ಅವಧಿಯಲ್ಲಿ, ಮೂವರು ಕೂಲಿ ಕಾರ್ಮಿಕರು, ಕಾಡಾನೆ ದಾಳಿಯಿಂದ ಮೃತಪಟ್ಟಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿಯಲ್ಲಿ, ಗರಿಷ್ಠ 44 ದಶಾಂಶ 7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಚುನಾವಣಾ ಆಯೋಗದ ನಿರ್ದೇಶನ; ಇಂದು ಮನೆ ಮನೆ ಪ್ರಚಾರಕ್ಕಷ್ಟೇ ಅವಕಾಶ.
- ಲೋಕಸಭೆ ಚುನಾವಣೆ ಪ್ರಕ್ರಿಯೆ ವೀಕ್ಷಣೆಗೆ, 23 ದೇಶಗಳ ಪ್ರತಿನಿಧಿಗಳು, ದಿಲ್ಲಿಗೆ ಆಗಮನ.
- 14 ಲೋಕಸಭಾ ಕ್ಷೇತ್ರಗಳಲ್ಲಿ, ಸಾಂಪ್ರದಾಯಿಕ ಮತ್ತು ಧ್ಯೇಯಾಧಾರಿತ ಮತಗಟ್ಟೆಗಳ ಸ್ಥಾಪನೆ.
- ನುಡಿದಂತೆ ನಡೆದ ಕಾರಣ; ಜನತೆಯಲ್ಲಿ ತಮ್ಮ ಸರ್ಕಾರದ ಬಗ್ಗೆ ವಿಶ್ವಾಸ ಮೂಡಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ